

ಜಲಲ ಜಲಲ ಜಲಧಾರೆ... ಕೂಡ್ಲು ಜಲಪಾತದ ಮನಮೋಹಕ ನೋಟ

# ಕೂಡ್ಲು ಬೆಡಗು; ಸೀತೆಯ ಸೆರಗು

■ ಚಿತ್ರ ಲೇಖನ: ಪ್ರಸಾದ್ ಶೆಣೈ ಆರ್ ಕೆ.

ಆಗುಂಬೆ–ಹೆಬ್ರಿ ಮಾರ್ಗದ ಬಳುಕಿನ ದಾರಿಯಲ್ಲಿರುವ ಕೂಡ್ಲು ತೀರ್ಥ ಜಲಪಾತಕ್ಕೆ ಹೋಗುವ ದಾರಿ ಹಿಡಿದರೆ, ದೂರದಲ್ಲೆಲ್ಲೋ ಜಲಪಾತದ ಜೋಗುಳ ಕಿವಿಯ ತೂಗಿಸುತ್ತದೆ. ಅದಕ್ಕೆ ಹಿನ್ನೆಲೆಯಾಗಿ ಜುಗಲ್‌ಬಂದಿ ನೀಡುವ ಹಕ್ಕಿಗಳ ಹಾಡು, ನಡೆಯುತ್ತ ಹೋದಂತೆಲ್ಲಾ ಪಕ್ಕದಲ್ಲೇ ಮುಗಿಲ ನೆತ್ತಿಗೆ ತಾಗಿದಂತೆ ನಿಂತಿರುವ ಹಸಿರ ಬೆಟ್ಟದ ತುದಿ, ಕೊಂಚ ದೂರ ನಡೆದರೆ ‘ಬನ್ನಿ ನನ್ನ ಬಳಿ’ ಅಂತ ಕೂಡ್ಲು ಕರೆದಂತಾಗಿ ಮೈಗೆಲ್ಲಾ ಉಲ್ಲಾಸ ಟಿಸಿಲೊಡೆಯುತ್ತದೆ.

ಒಂದಷ್ಟು ಕಾಡದಾರಿಯಲ್ಲಿ ನಡೆದರೆ ಒಮ್ಮೆ ಹಾಲಪುಡಿಯಂತೆ, ಮತ್ತೊಮ್ಮೆ ಹಾಲಿನಂತೆಯೇ ಉದುರುತ್ತಿದ್ದ ಕೂಡ್ಲುವಿನ ಜಲವೈಭವಕ್ಕೆ ಮನವರಳುತ್ತದೆ.

ಉಡುಪಿ ಜಿಲ್ಲೆಯ ಹೆಬ್ರಿಯಲ್ಲಿರುವ ಸೀತಾ ನದಿ ಹರಿದು, ಎತ್ತರದಿಂದ ಧುಮ್ಮಿಕ್ಕಿ ಕೂಡ್ಲು ಜಲಪಾತವಾಗಿದೆ. ಹಾಗೇ ಧುಮ್ಮಿಕ್ಕುವ ಕೂಡ್ಲು, ಆಗುಂಬೆ ಕಾಡಿನತ್ತ ಇನ್ನಷ್ಟು ಜಲಧಾರೆಯಾಗಿ ಚಿಮ್ಮುತ್ತದೆ. ಸುಮಾರು 180 ಅಡಿ ಎತ್ತರದಿಂದ ಸುರಿದು ನೀಳವಾಗಿ ಇಳೆಗೆ ಉದುರಿ ಸ್ವರ್ಗವಾಗುವ ಕೂಡ್ಲುವಿನ ನೋಟ ಹಬ್ಬದೂಟ. ಇಲ್ಲಿನ ನೀರಿನ ತಂಪು ಮನಮೋಹಕ.

